ಅಸಲು ದಾವೆ ನಂಃ 66/2018 ಪಿ.ಡಬ್ಲ್ಯೂಃ2- ಲಕ್ಷ್ಮಪ್ಪ ಬೂಸಣ್ಣವರ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 24-06-2023 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 4 ರಿಂದ 9 ನೇ ಪ್ರತಿವಾದಿ ಪರ ಶ್ರೀ ವಿ.ಡಿ.ಪಿ. ವಕೀಲರಿಂದಃ**

1. ನಾನು ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಿದ್ದೇನೆ. ಈ ದಾವೆ ಹನಮಂತಪ್ಪ ಇವರು ಗಾಜಿ ಇವರ ಮೇಲೆ ಹೊಲದ ಬಗ್ಗೆ ಕೇಸ್ ಹಾಕಿದ್ದಾರೆ. ನಾನು ಅಸೂಟಿ ಗ್ರಾಮದಲ್ಲಿ ಯಾವುದು ಹಿರೆತನ ಮಾಡಿಲ್ಲ. ಸದರಿ ಕೇಸ್ ನಲ್ಲಿ ದಾವಾ ಆಸ್ತಿಗಳು 7 ಎಕರೆ 30 ಗುಂಟೆ ಇದೆ. ಅದು ಯಾರ ಹೆಸರಿನಲ್ಲಿ ಇಲ್ಲ. ಅವರು ಒಟ್ಟು 2 ಪಟ್ಟಿ ಇವೆ. ಅವುಗಳ ಚಕ್ಕಬಂದಿ ಹೇಳಲು ಬರುವುದಿಲ್ಲ. ಮೂಲ ಪುರುಷ ಹನಮಂತಪ್ಪನಿಗೆ ಮೂರು ಜನ ಮಕ್ಕಳು. ಅವರ ಹೆಸರು 1) ಯಲ್ಲಪ್ಪ, 2) ಲಕ್ಷ್ಮವ್ವ 3) ಹನಮವ್ವ. ಮೂಲ ಪುರುಷ ಹನಮಂತಪ್ಪನಿಗೆ 2) ಲಕ್ಷ್ಮವ್ವ 3) ಹನಮವ್ವ ಎಂಬ ಹೆಣ್ಣು ಮಕ್ಕಳು ಇರಲಿಲ್ಲ, ಮರಿಯಪ್ಪ ಮತ್ತು ಯಲ್ಲಪ್ಪ ಎಂಬ ಇಬ್ಬರು ಗಂಡು ಮಕ್ಕಳು ಮಾತ್ರ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮರಿಯಪ್ಪ ಬೇರೆ ಯಲ್ಲಪ್ಪ ಬೇರೆ ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಹನಮಂತಪ್ಪ ಯಲ್ಲಪ್ಪನ ಹೆಂಡತಿಯ ಸಂಬಂಧಿಕ. ನಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಕಾಣಿಸಿರುವ ಹಾಗೇ ನಾನು ಸಹ ಮೂಲ ಪುರುಷ ಹನಮಂತಪ್ಪನಿಗೆ ಸಂಬಂಧಿಕ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 10 ರಿಂದ 12 ನೇ ಪ್ರತಿವಾದಿಯರು ಮೂಲ ಪುರುಷ ಹನಮಂತಪ್ಪನಿಗೆ ಸಂಬಂಧಿಕ ಅಲ್ಲ ಎಂದರೆ ಸರಿಯಲ್ಲ. ಅವರುಗಳು ಮೂಲ ಪುರುಷನ ವಂಶಸ್ಥರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಲ ಪುರುಷ ಹನಮಂತಪ್ಪನಿಗೆ ಮರಿಯಪ್ಪ ಮತ್ತು ಯಲ್ಲಪ್ಪ ಎಂಬ ಇಬ್ಬರು ಗಂಡು ಮಕ್ಕಳು ಮಾತ್ರ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 9 ನೇ ಪ್ರತಿವಾದಿಯರು ಮೂಲ ಪುರುಷ ಹನಮಂತಪ್ಪನ ಸಂಬಂಧಿಕರು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 9 ನೇ ಪ್ರತಿವಾದಿಯರು ಮೂಲ ಪುರುಷನ ಮಗ ಮರಿಯಪ್ಪನ ಮಕ್ಕಳು ಮತ್ತು ಹೆಂಡತಿ ಇದ್ದಾರೆ ಎಂದರೆ ಸರಿಯಲ್ಲ.

2. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಮ್ಮ ವಕೀಲರು ಮಾಹಿತಿ ಕೊಟ್ಟಿದ್ದಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರ ಈಗ ನೋಡುತ್ತಿದ್ದೇನೆ. ಅದಕ್ಕೆ ಮಾಹಿತಿ ನಮ್ಮ ವಕೀಲರು ಕೊಟ್ಟಿದ್ದಾರೆ. 1 ಮತ್ತು 9 ನೇ ಪ್ರತಿವಾದಿಯರ ಮಧ್ಯದಲ್ಲಿ ರೋಣದ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಓ.ಎಸ್.ನಂಬರ 27/2015 ರಂತೆ ದಾವೆ ಆಗಿ ಅಲ್ಲಿ ರಾಜಿ ಆದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಈಗ ವಾದಿಯೇ ಸ್ವಾಧೀನದಲ್ಲಿ ಇದ್ದಾರೆ ಎಂದು ಹೇಳುತ್ತಾರೆ. 1 ರಿಂದ 9 ನೇ ಪ್ರತಿವಾದಿಯರು ದಾವಾ ಆಸ್ತಿಯ ಕಬ್ಜಾದಲ್ಲಿ ಇದ್ದು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಿ 1 ರಿಂದ

9 ನೇ ಪ್ರತಿವಾದಿಯರು ತಮ್ಮ ಹೆಸರು ಹಚ್ಚಿಕೊಂಡಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. 1 ರಿಂದ 9 ನೇ ಪ್ರತಿವಾದಿಯರು ವಾದಿಗೆ ಮೋಸ ಮಾಡಿಲ್ಲ ಎಂದರೆ ಸರಿಯಲ್ಲ.

3. ವಾದಿ ಹನಮಂತಪ್ಪ ಮೂಲ ಪುರುಷನ ಮಗ ಯಲ್ಲಪ್ಪ ಮತ್ತು ಆತನ ಹೆಂಡತಿ ರಂಗವ್ವ ಇವರಿಗೆ ದತ್ತಕ ಹೋದ ಬಗ್ಗೆ ನಾನು ಆ ಕಾರ್ಯಕ್ರಮಕ್ಕೆ ಹೋಗಿದ್ದೆ. ಅದು ಯಾವ ತಾರೀಕು ನನಗೆ ನೆನಪಿಲ್ಲ, ಮೂವತ್ತು ವರ್ಷ ವಾಗಿದೆ. ನಾನು ಆ ಕಾರ್ಯಕ್ರಮಕ್ಕೆ ಹೋದಾಗ ಹೋದಾಗ ಗೊತ್ತಾಯಿತು. ದತ್ತಕ ಕಾರ್ಯಕ್ರಮ ಹನಮವ್ವನ ಮನೆಯಲ್ಲಿ ಆಯಿತು. ಫಕ್ಕೀರಪ್ಪ ಮತ್ತು ಯಲ್ಲವ್ವ ತಮ್ಮ ಮಗನನ್ನು ಯಲ್ಲಪ್ಪ ಮತ್ತು ರಂಗವ್ವ ಇವರಿಗೆ ದತ್ತಕ ಕೊಟ್ಟರು. ನನ್ನನ್ನು ಬಿಟ್ಟು ಬೇರೆ ಯಾರೂ ಇದ್ದರೂ ಎಂದು ನನಗೆ ಗೊತ್ತಿಲ್ಲ. ದತ್ತಕ ಕಾರ್ಯಕ್ರಮದಲ್ಲಿ ಯಾವುದೇ ಬರವಣಿಗೆಯಲ್ಲಿ ದತ್ತಕ ಪತ್ರ ಆಗಿಲ್ಲ.

4. ದತ್ತಕವಾದ ನಂತರ ಹನಮಂತಪ್ಪನ ಶಾಲಾ ದಾಖಲೆಯಲ್ಲಿ ಆತನ ತಂದೆಯ ಹೆಸರು ಯಲ್ಲಪ್ಪ ಅಂತಾ ಇತ್ತು. ಅಲ್ಲಿ ದತ್ತಕ ತಂದೆ ಎಂದು ಇದೆಯೋ ಅಥವಾ ಬರಿ ತಂದೆ ಎಂದು ಇದೆಯೋ ನನಗೇ ಗೊತ್ತಿಲ್ಲ. ವಾದಿಯ ಬ್ಯಾಂಕ ಅಕೌಂಟ್ ಮತ್ತು ಆಧಾರ ಕಾರ್ಡನಲ್ಲಿ ತಂದೆಯ ಹೆಸರು ಯಲ್ಲಪ್ಪ ಎಂದು ಇದೆ. ಮೂಲ ಪುರುಷ ಹನಮಂತಪ್ಪನ ಮಗ ಯಲಪ್ಪನಿಗೆ ಮಕ್ಕಳ ಇಲ್ಲದ ಕಾರಣ ಹಾಗೂ ವಾದಿಯ ತಂದೆಯ ಹೆಸರು ಯಲ್ಲಪ್ಪ ಇವರು ಕಾರಣ ಅದನ್ನು ದುರುಪಯೋಗ ಮಾಡಿಕೊಂಡು ತಾನು ಯಲಪ್ಪನ ಮಗ ಎಂದು ಸುಳ್ಳು ದಾವೆ ಮಾಡಿದ್ದಾನೆ ಎಂದರೆ ಸರಿಯಲ್ಲ. ನಾನು ಮೂಲತಃ ಅಸೂಟಿ ಗ್ರಾಮದವನು. ನನ್ನ ಹೆಂಡತಿ ಮಕ್ಕಳೊಂದಿಗೆ ನನ್ನ ಸಂಬಂಧ ಸರಿ ಇಲ್ಲದ ಕಾರಣ ನಾನು ಈಗ ವಾದಿಯ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ನಿಜ. ವಾದಿ ಹನಮಂತಪ್ಪ ನನ್ನ ಸಂಬಂಧಿಕ ಎಂದರೆ ಸರಿಯಲ್ಲ. ನಾನು ವಾದಿಯ ಮನೆಯಲ್ಲಿ ಇರುವುದರಿಂದ ವಾದಿಗೆ ಅನುಕೂಲವಾಗಲಿ ಎಂದದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**( ಆದಿತ್ಯ ಆರ್ ಕಲಾಲ್ )**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.